ಓ ಎಸ್ ನಂಃ 220-15
ಪಿ ಡಬ್ಲ್ಯೂ ಃ 1

ದಿಃ 23-01-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎ ಎಸ್ ಎಸ್ ವಕೀಲರಿಂದ

2ನೇ ವಾದಿಯ ಬಾಣಂತನಕ್ಕೆ ಹೋದಾಗ ನನ್ನ ತಾಯಿಯ ತಂದೆ ಯಶವಂಶಪುರದಲ್ಲಿರುವ ಆಸ್ತಿಯನ್ನು ಖರೀದಿಸಲು ಹಣ ಕೊಟ್ಟಿದ್ದರು ಆಗ 4ನೇ ಪ್ರತಿವಾದಿ ಆ ಹಣದಲ್ಲಿ ಸದರಿ ಆಸ್ತಿಯನ್ನು ಖರೀದಿ ಮಾಡಿದ್ದರು. 2ನೇ ವಾದಿ 1978 ರಲ್ಲಿ ಹುಟ್ಟಿರಬಹುದು. ನಾನು 1982 ರಲ್ಲಿ ಜನಿಸಿರುತ್ತೇನೆ. ನನ್ನ ತಾಯಿಯ ತಂದೆ 4ನೇ ಪ್ರತಿವಾದಿಗೆ ಹಣ ಕೊಟ್ಟ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಯಶವಂತಪುರ ಮತ್ತು ಜಾರಕಬಂಡೆ ಕಾವಲ್ ನಲ್ಲಿರುವ ಆಸ್ತಿಗಳನ್ನು ಭಾಗದಲ್ಲಿ ಮತ್ತು ಜೀವನಾಂಶಕ್ಕಾಗಿ 4ನೇ ಪ್ರತಿವಾದಿ ಕೊಟ್ಟಿದ್ದು ನಾವು ಅವುಗಳನ್ನು ಕಾನೂನು ಬಾಹಿರವಾಗಿ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಾವು ಈಗಾಗಲೇ ಜೀವನಾಂಶಕ್ಕಾಗಿ ಕೊಟ್ಟಂತಹ ಆಸ್ತಿಗಳನ್ನು ಮಾರಾಟ ಮಾಡಿದ್ದು ಈಗ ಪ್ರತಿವಾದಿಗಳಿಗೆ ತೊಂದರೆ ಕೊಡಲು ದಾವಾ ಆಸ್ತಿಗಳ ಮೇಲೆ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಯಶವಂತಪುರಮತ್ತು ಜಾರಕಬಂಡೆ ಕಾವಲ್ ನಲ್ಲಿರುವ ಆಸ್ತಿಗಳನ್ನು ಮಾರಾಟ ಮಾಡಲು ನನ್ನ ತಂದೆ, ನನ್ನ ತಾಯಿಗೆ ಮುಕ್ತರು ನಾಮೆ ಬರೆದುಕೊಟ್ಟಿಲ್ಲ, 1996 ರ 2 ವರ್ಷಗಳ ಹಿಂದಿನಿಂದ ನನ್ನ ತಂದೆ ಮತ್ತು ತಾಯಿಯ ಮದ್ಯೆ ಮಾತುಕತೆ ಇರಲಿಲ್ಲ ನಾವು ಮುಕ್ತರು ನಾಮೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಯಶವಂತಪುರಮತ್ತು ಜಾರಕಬಂಡೆ ಕಾವಲ್ ನಲ್ಲಿರುವ ಮಾರಾಟದ ಬಗ್ಗೆ ನನ್ನ ತಾಯಿಯನ್ನು ಸಾಕ್ಷಿಯನ್ನಾಗಿ ವಿಚಾರಣೆ ಮಾಡಿಸುತ್ತೇನೆ.

ಯಶವಂತಪುರ ಮತ್ತು ಜಾರಕಬಂಡೆ ಕಾವಲ್ ನಲ್ಲಿರುವ ಆಸ್ತಿಗಳು ಇವತ್ತಿಗೆ 8-10 ಕೋಟಿ ರೂ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ಅವುಗಳು ಎಷ್ಟು ಬೆಲೆ ಬಾಳುತ್ತದೆ ನನಗೆ ಹೇಳಲು ಬರುವುದಿಲ್ಲ. ಆ ಆಸ್ತಿಗಳ ಮೌಲ್ಯದ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮೇಲೆ ಹೇಳಿದ ಎರಡು ಆಸ್ತಿಗಳನ್ನು ಮಾರಾಟ ಮಾಡಿದ್ದು, ಆದ ಕಾರಣ ನಮಗೆ ದಾವಾ ಆಸ್ತಿಗಳ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಕೂಡ್ಲುರು ಗ್ರಾಮದಲ್ಲಿರುವ ಮನೆಯಲ್ಲಿ ಎಂದಿಗೂ ಒಟ್ಟು ಕುಟುಂಬದಲ್ಲಿ ವಾಸವಿರಲಿಲ್ಲ ಎಂದರೆ ನಾವು ರಜಾ ದಿನಗಳಲ್ಲಿ ಬಂದು ಹೋಗಿ ಮಾಡುತ್ತಿದ್ದೆವು ಎಂದು ಹೇಳುತ್ತಾರೆ. ನಾವು ಪ್ರತಿವಾದಿಗಳ ಜೊತೆ ಒಟ್ಟು ಕುಟುಂಬದಲ್ಲಿ

ಇರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಾವು ಯಶವಂತಪುರ ಮತ್ತು ಜಾರಕಬಂಡೆ ಕಾವಲ್ ನಲ್ಲಿರುವ ಆಸ್ತಿಗಳನ್ನು ಭಾಗದಲ್ಲಿ ಪಡೆದಿದ್ದರಿಂದ ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಆದರೂ ಸಹ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಸುಳ್ಳು ಸಾಕ್ಷಿ ಹೇಳಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.
ಮರು ವಿಚಾರಣೆ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**